| Deposition Sheets (RP.No.57) Form No.4 |
|---|

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 214/2015**

ಪಿ.ಡಬ್ಲ್ಯು : 9 ಸಿ.ಡಬ್ಲ್ಯು : 12

ಸಾಕ್ಷಿದಾರರ ಹೆಸರು : ಮಹಾಂತಯ್ಯ
ತಂದೆಯ ಹೆಸರು : ಈಶ್ವರಯ್ಯ ಕುಮಾರಿ
ಪ್ರಾಯ : 44 ವರ್ಷ
ಉದ್ಯೋಗ : ಗ್ರಾಮ ಪಂಚಾಯತಿ ಬಿಲ್ಲಕಲೇಕ್ಟರ
ವಾಸ : ಹನುಮಸಾಗರ

ದಿನಾಂಕ 3.08.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ದಿನಾಂಕಃ6/11/2014 ರಂದು ಜುಂಜಲಕೊಪ್ಪ ಕ್ರಾಸ್ ಬಳಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ದಿನಾಂಕಃ5/11/2014 ರಂದು ಜುಂಜಲಕೊಪ್ಪ ಕ್ರಾಸ್ ಬಳಿ ಸಂಬವಿಸಿದ ಅಪಘಾತದ ಕುರಿತು ಜರುಗಿಸಿದ ಮಹಜರು ಆಗಿರುತ್ತದೆ. ಸದರಿ ಮಹಜರನ್ನು ದಿನಾಂಕಃ6/11/2014 ರಂದು ಬೆಳಗ್ಗೆ 7.30 ಗಂಟೆಯಿಂದ 8.30 ಗಂಟೆಯವರೆಗೆ ಜರುಗಿಸಿರುತ್ತಾರೆ. ಸದರಿ ಮಹಜರು ಜರುಗಿಸುವ ಸಮಯದಲ್ಲಿ ನನ್ನ ಸಮಕ್ಷಮ ಮೋಟಾರು ಸೈಕಲ್ ನ್ನು ಸ್ವಾದೀನಪಡಿಸಿಕೊಂಡಿರುತ್ತಾರೆ. ತಕ್ಷೀರು ಸ್ಥಳದ ಮಹಜರನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸದರಿ ಮೋಟಾರು ಸೈಕಲ್ ನೊಂದಣಿ ಸಂಖ್ಯೆ ಮತ್ತು ಬಣ್ಣ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-**</u>

ನನ್ನ ಸಮಕ್ಷಮ ಸ್ವಾದೀನಪಡಿಸಿಕೊಂಡಿದ್ದ ಮೋಟಾರ ಸೈಕಲ್ ನೊಂದಣಿ ಸಂಖ್ಯೆಯು ಕೆಎ:37/ಎಲ್:727 ಆಗಿತ್ತು ಎಂದರೆ ಸರಿ. ಸದರಿ ಮೋಟಾರು ಸೈಕಲ್ ನೀಲಿ ಬಣ್ಣದ ಮೋಟರು ಸೈಕಲ್ ಆಗಿತ್ತು ಎಂದರೆ ಸರಿ.

**<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ವಿ ಎಸ್ ಎಸ್ ವಕೀಲರಿಂದ :**

ನಾನು ಸುಮಾರು 70 ಪ್ರಕರಣಗಳಲ್ಲಿ ಪಂಚರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಈ ಹಿಂದೆ 1 ಪ್ರಕರಣದಲ್ಲಿ ಮಾತ್ರ ಸಾಕ್ಷಿಯಾಗಿ ಸಾಕ್ಷವನ್ನು ನುಡಿದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಇತ್ತಿಚೆಗೆ ಯಾವುದೆ ಪ್ರಕರಣಗಳಲ್ಲಿ ಪಂಚರನಾಗಿ ಸಹಿ ಮಾಡಿರುವುದಿಲ್ಲ. ಪೋಲಿಸರು ನನಗೆ ದೂರವಾಣಿ ಕರೆ ಮಾಡಿ ಅಪಘಾತದ ಸ್ಥಳಕ್ಕೆ ಬರುವಂತೆ ಸೂಚಿಸಿದ ಮೇರೆಗೆ ಬಂದಿರುತ್ತೇನೆ. ಆ ರೀತಿ ಬೆಳಗ್ಗೆ 7.00 ಗಂಟೆಗೆ ದೂರವಾಣಿ ಕರೆ ಮಾಡಿದ್ದರು. ಸದರಿ ದಿನ ನಾನು ಪೋಲಿಸರೊಂದಿಗೆ ತಕ್ಷೀರು ಸ್ಥಳಕ್ಕೆ ಹೋಗಿರುತ್ತೇನೆ. ಸದರಿ ದಿನ ನಾನು ನನ್ನ ಮೋಟಾರು ಸೈಕಲ್ ನಲ್ಲಿ ಹೋಗಿರುತ್ತೇನೆ.

2. ಸದರಿ ದಿನ ಮೋಟಾರು ಸೈಕಲ್ ಗಳು ರಸ್ತೆಯ ಮದ್ಯದಲ್ಲಿದ್ದ ಗುಂಡಿಯಲ್ಲಿ ಬಿದ್ದಿದ್ದವು. ಸದರಿ ಗುಂಡಿ ಎಷ್ಟು ಆಳವಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಿನ ಅಪಘಾತ ಕುರಿತು ಪಂಚನಾಮೆ ಜರುಗಿಸಿದ ಸಲುವಾಗಿ ಪಂಚರನಾಗಿ ಸಹಿ ಮಾಡಿರುತ್ತೇನೆ. ನಿಪಿ-11 ನ್ನು ಬರೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಸದರಿ ದಿನ ತಕ್ಷೀರು ಸ್ಥಳದಲ್ಲಿ ಎರಡು ಸಹಿಗಳನ್ನು ಮಾಡಿರುತ್ತೇನೆ. ಸದರಿ ದಿನ ಮಹಜರು ಜರುಗಿಸುವ ಸಮಯದಲ್ಲಿ ನಾನು, ನಾಲ್ಕು ಜನ ಪೋಲಿಸರು, ಪಿರ್ಯಾದಿಯಾದ ಸೂಚಪ್ಪ ದೇವರಮನಿ , ದೊಡ್ಡವರಾದ ಬಸಪ್ಪ ತಂದಿ ಗುಡ್ಡಪ್ಪ ವಡ್ಡರ ಮತ್ತು ರಾಮಣ್ಣ ಮಣ್ಣೆರಾಳರವರುಗಳು ಇದ್ದೆವು. ನಾನು ಗ್ರಾಮ ಪಂಚಾಯತಿಯ ಬಿಲ್ ಕಲೇಕ್ಟರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ಆ ರೀತಿ 10 ವರ್ಷಗಳಿಂದ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಸಮಕ್ಷಮ ಸ್ವಾದೀನಪಡಿಸಿಕೊಂಡಿದ್ದರು ಎಂದು ಹೇಳುವ ವಾಹನಗಳ ಮಾಲೀಕರ ಹೆಸರು ಮತ್ತು ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ನನಗೆ ಪೋಲಿಸರು ಅಪಘಾತ ಯಾವ ರೀತಿ ಸಂಬವಿಸಿತ್ತು ಎಂದು ಹೇಳಿರುವುದಿಲ್ಲ. ನಾನು ಯಾವುದೆ ತಕ್ಷೀರು ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ತಕ್ಷೀರು ಸ್ಥಳದಲ್ಲಿ ಯಾವುದೆ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹನಮಸಾಗರ ಪೋಲಿಸ ಠಾಣೆಯ ಖಾಯಂ

ಪಂಚರ ಸಾಕ್ಷಿ ಎಂದರೆ ಸರಿಯಲ್ಲ. ನಾನು ಸುಮಾರು 15 ವರ್ಷಗಳಿಂದ ಹನಮಸಾಗರ ಠಾಣೆಯ ಹಲವು ಪ್ರಕರಣಗಳಲ್ಲಿ ಪಂಚರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸ ಠಾಣೆಯಲ್ಲಿ ತಯಾರಿಸಿಟ್ಟಿದ್ದ ನಿಪಿ-11 ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಶಿವಪ್ಪ ತಂದಿ ಚೆಂದಪ್ಪ ಕಂಪ್ಲಿ ರವರು ಸಹಿ ಮಾಡಿದ್ದರು. ಸದರಿ ಶಿವಪ್ಪ ತಂದಿ ಚೆಂದಪ್ಪ ಕಂಪ್ಲಿರವರು ಸಹಿ ಮಾಡಿದ್ದನ್ನು ನೋಡಿರುವುದಿಲ್ಲ. ನಾನು ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು, ಶಿವಪ್ಪ ಮತ್ತು ಚಾಸಾ-1 ಸ್ನೇಹಿತರು ಎಂದರೆ ಸಾಕ್ಷಿಯು ಪರಿಚಯ ಮಾತ್ರ ಎಂದು ನುಡಿಯುತ್ತಾರೆ. ಚಾಸಾ-1 ರವರು ನಾನು ಕೆಲಸ ಮಾಡುತ್ತಿರುವ ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು ಎಂದರೆ ಸಾಕ್ಷಿಯು ನಾನು ಕೆಲಸಕ್ಕೆ ಸೇರುವ ಪೂರ್ವದಲ್ಲಿ ಸದಸ್ಯರಾಗಿದ್ದರು ಎಂದು ನುಡಿಯುತ್ತಾರೆ. ಸದರಿ ಶಿವಪ್ಪರವರು ನಮ್ಮ ಪಂಚಾಯತಿಯ ಅಧ್ಯಕ್ಷರು ಆಗಿದ್ದರು ಎಂದರೆ ಸರಿ. ಸದರಿ ಶಿವಪ್ಪರವರು 2008 ರಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಆಗಿದ್ದರು. ನಾನು 2007 ರಿಂದ ಪಂಚಾಯತಿಯಲ್ಲಿ ಕೆಲಸ ಮಾಡಿಕೊಂಡು ಬಂದಿರುತ್ತೇನೆ. ನಾನು ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ